ವಿಷಯ:- ಹೋಟೆಲ್ ಕೃಷ್ಣರಾಜಸಾಗರ ಮತ್ತು ಹೋಟೆಲ್ ಮೆಟ್ರೋಪೋಲ್ ಬಾಡಿಗೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 117(541)
ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕೃಷ್ಣರಾಜ ಸಾಗರದಲ್ಲಿರುವ ಹೋಟೆಲ್ ಕೃಷ್ಣರಾಜಸಾಗರ ಮತ್ತು ಮೈಸೂರಿನಲ್ಲಿರುವ ಹೋಟೆಲ್ ಮೆಟ್ರೋಪೋಲ್ ಕಟ್ಟಡವನ್ನು ಎಷ್ಟು ಬಾಡಿಗೆಗೆ ಯಾವ ವರ್ಷದಿಂದ ಕೊಡಲಾಗಿದೆ?

ಶ್ರೀ ಶಿವಾನಂದ ಎಚ್. ಕೌಜಲಗಿ
(ಲೋಕೋಪಯೋಗಿ ಸಚಿವರು)

ಅ) ಹೋಟೆಲ್ ಕೆ.ಆರ್.ಎಸ್. ಮತ್ತು ಮೆಟ್ರೋಪೋಲ್ ಹೋಟೆಲ್‌ಗಳನ್ನು 1961 ರಿಂದ 1971ರ ವರೆಗೆ 3000-00 ರೂ.ಗಳ ಮಾಹೆಯಾನ ಬಾಡಿಗೆ ಮತ್ತು 1-10-71 ರಿಂದ 30-9-72ರ ವರೆಗೆ 6000 ರೂ.ಗಳ ಮಾಹೆಯಾನ ದಿನಾಂಕ 1-10-72 ರಿಂದ 30-9-82 ರವರೆಗೆ 20,000 ರೂ.ಗಳ ಮಾಹೆಯಾನ ಬಾಡಿಗೆಗೆ ಕೊಡಲಾಗಿದೆ.

ವಿಷಯ :- ವಿದ್ಯುತ್ ವಲಯದಲ್ಲಿ ವಿದೇಶಿ ಕಂಪನಿಗಳ ಜೊತೆ ಒಪ್ಪಂದ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ118(542)
ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವರಪುರ)

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

1. 9000 ಮೆಗಾವಾಟ್‌ಗಳಿಗಾಗಿ ವಿದ್ಯುಚ್ಛಕ್ತಿ ವಲಯದಲ್ಲಿ 1500 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಗಾಗಿ, ಸರ್ಕಾರವು ವಿದೇಶಿ ಫರ್ಮ್‌ಗಳೊಂದಿಗೆ ಒಪ್ಪಂದದ ತಿಳವಳಿಕೆ ಪತ್ರ (ಎಂ.ಓ.ಯು)ಕ್ಕೆ ಸಹಿ ಹಾಕಿದೆಯೇ?
2. ಹಾಗಿದ್ದರೆ, ಅವುಗಳ ವಿವರ ಮತ್ತು ರೈತರಿಗೆ ಅವುಗಳಿಂದಾಗುವ ಅನುಕೂಲಗಳನ್ನು ದಯವಿಟ್ಟು ತಿಳಿಸಿ.

ಶ್ರೀ ಜೆ.ಹೆಚ್ ಪಟೇಲ್
(ಉಪ ಮುಖ್ಯಮಂತ್ರಿಗಳು)

1. 4 ವಿದೇಶಿ ಫರ್ಮಗಳೊಂದಿಗೆ ಎಂ.ಓ.ಯುಗಳನ್ನು ಮುಂದುವರಿಸಲಾಗುತ್ತಿದೆ. ಯೋಜನೆಗಳಿಂದ ಒಟ್ಟಾರೆ ಅಂದಾಜು ವಿದ್ಯುಚ್ಛಕ್ತಿ ಉತ್ಪಾದನೆಯು 2600 ಮೆಗಾವ್ಯಾಟ್‌ಗಳು ವಿದ್ಯುಚ್ಛಕ್ತಿ ಖರೀದಿ ಒಪ್ಪಂದ ಪತ್ರಕ್ಕೆ ಮೆ. ಕೊಜೆಂಟ್ರಿಕ್ಸ್ ಯು ಎಸ್‌ಎ ಇವರೊಂದಿಗೆ ಸಹಿ ಹಾಕಲಾಗಿದೆ. ಮತ್ತು ಪಿಪಿಎ (ವಿದ್ಯುಚ್ಛಕ್ತಿ, ಖರೀದಿ ಒಪ್ಪಂದ) ಪ್ರಕಾರ ದಿನಾಂಕ 1-1-97ರಂದು ಯೋಜನೆಯ ಅತಿ ಹೆಚ್ಚಿನ ಗಾತ್ರ ರೂ. 4,387.48 ಕೋಟಿ ಎಂದು ಸೂಚಿಸಿದೆ. ವಿದ್ಯುಚ್ಛಕ್ತಿ ಯೋಜನಾ ವೆಚ್ಚವನ್ನು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಅಂತಿಮಗೊಳಿಸಲಾಗುವುದು. ಇತರ ಮರು ಫರ್ಮಗಳ ಸಂಬಂಧದಲ್ಲಿ ವಿದ್ಯುಚ್ಛಕ್ತಿ ಖರೀದಿ ಒಪ್ಪಂದ ಮತ್ತು ಅವುಗಳಿಗೆ ತಗಲುವ ವೆಚ್ಚವವು ಚರ್ಚೆಯಲ್ಲಿವೆ.

2. ವಿವರಗಳು ಈ ಮುಂದಿನಂತಿವೆ:

1. ಕೊಜೆಂಟ್ರಿಕ್ಸ್, ಯು.ಎಸ್.ಎ. ಮಂಗಳೂರಿನಲ್ಲಿ 1000 ಮೆಗಾವಾಟ್ ಟಿಪಿಎಸ್.

2. ಎಚ್.ಓ.ಕೆ (ಅಂತರಾಷ್ಟ್ರೀಯ) ಯುಎಸ್‌ಎ)- ಹೊಸಪೇಟೆಯಲ್ಲಿ 500 ಮೆಕಾವಾಟ್ ಟಿಪಿಎಸ್.

3. ಪಿಪಿಐ, ಯುಎಸ್‌ಎ- ರಾಯಚೂರಿನಲ್ಲಿ ಮತ್ತು 6.

4. ಟಾಸ್ಕೋ ಯುಎಸ್‌ಎ- 600 ಮೆಗಾವಾಟ್ ಆಲ್ಮಟ್ಟಿಯಲ್ಲಿ ಜಲ ವಿದ್ಯುತ್ ಯೋಜನೆ (1ನೇ ಹಂತ)

ಈ ವಿದ್ಯುಚ್ಛಕ್ತಿ, ಯೋಜನೆಗಳಅನುಷ್ಠಾನಗೊಳಿಸಿದುದರ ಪರಿಣಾಮದಿಂದಾಗಿ ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಪಡೆಯಬಹುದು.

ವಿಷಯ:- ಹಳ್ಳಿಗಳ ಅಭಿವೃದ್ಧಿಗೆ ಶೇ 70 ರಷ್ಟು ಹಣ ಕೊಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 119 (543)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ)

ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಳ್ಳಿಗಳ ಅಭಿವೃದ್ಧಿಗೆ ಶೇ. 70ರಷ್ಟು ಹಣವನ್ನು ಖರ್ಚು ಮಾಡಲು ಸರ್ಕಾರದವರು ಪರಿಶೀಲಿಸುವರೆ?